

# ವಾವ್! ಸೌತೆ ಕಾಯ್!

ಇಸ್ರೇಲಿನ ಮಿಟ್ಜಕ್ ಯಜ್ಡನ್ ಪಾನಾ ಎಂಬ ರೈತನ ತೋಟದಲ್ಲಿ ಬರೋಬ್ಬರಿ ಮೂರು ಅಡಿ ಹತ್ತು ಇಂಚು ಅಂದರೆ ಸುಮಾರು 118 ಸೆಂ.ಮೀ ಉದ್ದದ ಸೌತೆ ಕಾಯಿ ಎಲ್ಲರೂ ಬೆರಗಾಗುವಂತೆ ಬೆಳೆದುನಿಂತಿದೆ!

ಈ ಸೌತೆ ಕಾಯಿ ಇಷ್ಟೊಂದು ಉದ್ದ ಬೆಳೆಯಲು ಹೇಗೆ ಸಾಧ್ಯವಾಯಿತು? ಎನ್ನುವುದೀಗ ಎಲ್ಲರ ವಿಸ್ಮಯ. ಕಾರಣ ಪಾನಾಗೂ ಗೊತ್ತಿಲ್ಲವಂತೆ. ‘ಯಾವ ರಾಸಾಯನಿಕ ಗೊಬ್ಬರವನ್ನೂ ಬಳಸಿಲ್ಲ. ವಿಶೇಷ ಶ್ರಮವನ್ನೂ ಹಾಕಿಲ್ಲ’ ಎಂದಾತ ಸ್ಪಷ್ಟವಾಗಿ ಹೇಳಿದ್ದಾನೆ. ಈ ಹಿಂದೆಯೂ ಒಮ್ಮೆ ಈತನ ತೋಟದಲ್ಲಿ ಎರಡು ಅಡಿ ಉದ್ದನೆಯ ಸೌತೆ ಬೆಳೆದಿತ್ತಂತೆ.

ಈ ಹಿಂದೆ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ನಡೆದ ನ್ಯಾಷನಲ್ ಅಮೆಚೂರ್ ಗಾರ್ಡನ್ ಷೋನಲ್ಲಿ ಪ್ರದರ್ಶನಗೊಂಡು ಗಿನ್ನಿಸ್ ವರ್ಲ್ಡ್ ರೆಕಾರ್ಡ್‌ನಲ್ಲಿ ನಮೂದಾಗಿದ್ದ ಸೌತೆ ಕಾಯಿಯ ಉದ್ದ 91.69 ಸೆಂಟಿ ಮೀಟರ್ ಇತ್ತು. ಈಗ ಪಾನಾ ತನ್ನ ಹೊಸ ಸೌತೆಕಾಯಿಯೊಂದಿಗೆ ಗಿನ್ನಿಸ್ ದಾಖಲೆಯನ್ನು ಮುರಿಯಲು ಹೊರಟಿದ್ದಾನೆ. ನಮ್ಮಲ್ಲಿ ಬಿ.ಟಿ ಬದನೆಕಾಯಿ ಗದ್ದಲ ಮುಗಿಲು ಮುಟ್ಟಿರುವ ಹೊತ್ತಲ್ಲೇ ದೂರದ ಇಸ್ರೇಲಿನಲ್ಲಿ ರೈತನೊಬ್ಬ ಅತಿ ಉದ್ದದ ಸೌತೆಕಾಯಿ ಬೆಳೆದು ಗದ್ದಲ ಎಬ್ಬಿಸಿರುವುದು ವಂಡರ್ ವಿಚಾರವೇ ಸರಿ.

■ ವಿದ್ಯಾ ಹಾಲಭಾವಿ